11. ಕಂಟ್ರಾಕ್ಟುದಾರನಿಗೆ ಒಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರ ಯಜಮ್ಮಾಯಿಂದ 50 ರೂಪಾಯಿಗೆ ಮಿಗದ ಬಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ವೊಬಲ್ಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ್ ಸೂಪರ್‌ಟೆಂಟೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

ಕಂಟ್ರಾಕ್ಟುದಾರನು ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

15. ಆಹಾರ ದರದ ಪಟ್ಟಯನ್ನು ಇತರ ಹಚ್ಚಿಗೆ ತಪಶೀಲ್‌ಗಳನ್ನು ಸುದಾ ಸೂಪರ್‌ಟೆಂಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

ಪಿ. ಜೆಟ್. ಬ್ಯಸ್ಟ್,
ಮೈಸೂರು ಜೈಲ್ ಸೂಪರ್‌ಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 4.

ಮೃತಪಟ್ಟ ಬೇಲೂರ ತಾಲ್ಲೂಕು ನಡುವಿಲ ಫಿರಕಾ ಕೆನಿವಾರ ಸಂತೆ ಹೋಬಳಿ ಕಳಸೆರಿ ಗ್ರಾಮದ ಚನ್ನೇಗೌಡಯಾನೆ ಬಿಳೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಚನ್ನಮ್ಮ ಹೆಗ್ಗಡತಿಯು, ಮೃತಪಟ್ಟ ಬಿಳೇಗವುಡನು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕಳಸೆರಿ ಚನ್ನಮ್ಮನು ಕಳಸೆರಿ ವಾಸಸ್ಥನಾಗಿ ಮೃತಪಟ್ಟ ಬಿಳೇಗವುಡನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮನ ಅರ್ಜೀಯನ್ನು 1884ನೇ ಇಸವೀ ಫಿಬ್ರವರೀ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿಳೇಗವುಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಜನವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ

ಬಿ. ತಿರುಮಲಾಚಾರ್,
ಸಬ್ ಜಡ್ಜ್.

ನಗರ ಡಿವೀರ್ಜ್.

ನಗರ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 11.

ಮೃತಪಟ್ಟ ತೀರ್ಥಹಳ್ಳಿ ಹಾಜಿ ಇಬ್ರಾಹಿಂಸೇಟ್‌ನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಇಸ್ಮಾಯಿಲ್‌ಸೇಟ್, ಮೃತಪಟ್ಟ ಸದರೀ ಹಾಜಿ ಇಬ್ರಾಹಿಂಸೇಟ್‌ಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಇಸ್ಮಾಯಿಲ್‌ಸೇಟನು, ತೀರ್ಥಹಳ್ಳಿ ಮತ್ತು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಹಾಜಿ ಇಬ್ರಾಹಿಂಸೇಟನ ಜಿಂದಗಿ ಬಗ್ಯಾಗಿ -

ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವಕ್ಕೆ 1860ನೇ ಇಸವಿ 27ನೇ ಅಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಇಸಮಾಯಿಲ್‌ಸೇಟಿನ ಅರ್ಜಿಯನ್ನು 1884ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟು ಹಾಜಿ ಇಬ್ರಾಹಿಂಸೇಟಿನ ಅಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರವರೀ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟುಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಸ್ಯ 1883ನೇ ಇಸವಿ ಡಿಶಂಬರ್ ತಿಂಗಳ ಬಾಬತು ಕಾಲಸ್ಥಿತೀ ರಿಪೋರ್ಟು.

ತುಮಕೂರು ಡಿಸ್ಟ್ರಿಕ್ಟು.

ಮಳೆ—ಪಾವಗಡ ವಿನಾ ತಮಾಂ ತಾಲ್ಲೂಕುಗಳಲ್ಲಿಯೂ ಮಳೆ ಬಿದ್ದಿರುತ್ತೆ; ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಈ ಕೆಳಗೆ ಕಂಡ ಮೇರೆ ಮಳೆ ಪರಿಮಾಣವು ಅಳಿಯಲ್ಪಟ್ಟಿತು:—

ತಾಲ್ಲೂಕು.	ಇಂ.	ಸೆಂ.	ತಾಲ್ಲೂಕು.	ಇಂ.	ಸೆಂ.
ತುಮಕೂರು ..	0	72	ತಿಪಟೂರು ..	0	95
ಮದ್ದಗಿರಿ ..	2	10	ಪಾವಗಡ	0	0
ಚಿಕ್ಕನಾಯಕನಹಳ್ಳಿ ..	2	75	ಚಿತ್ರದುರ್ಗ ..	0	84
ಸೀರಾ ..	1	25	ಚಳ್ಳಕೆರೆ ..	0	15
ಗುಬ್ಬಿ ..	0	60	ಹೊಳಲ್ಕೆರೆ ..	1	20
			ಹಿರಿಯೂರು ..	1	30

ಹವಾ.—ಬೆಳಗಿನ ಹೊತ್ತು ಸಾಯಂಕಾಲದ ಹೊತ್ತು ಛಳಿಯಾಗಿತ್ತು.

ಫಸಲ್‌ಗಳು—ಭತ್ತ, ಜೋಳ, ಕಡಲೆ, ಗೋಧಿ, ಕೊತ್ತಂಬರಿ, ಮೆಂತ್ಯ, ಗನ್ನ, ಹುರಳಿ, ಹೊಗೆಸೊಪ್ಪು, ಈರುಳ್ಳಿ, ಬಳ್ಳಿಳ್ಳಿ, ಮತ್ತು ಜೀರಿಗೆ, ಕೆಲವು ಭಾಗಾಗಳಲ್ಲಿ ವೇರಾವಾದವು. ಅಡಿಕೆ, ತೆಂಗಿನಕಾಯಿ, ರಾಗಿ, ಭತ್ತ, ಮೆಣಸಿನಕಾಯಿ, ಹರಳು, ಕಡಲೆ, ಕೊರಲೆ, ನವಣೆ, ಸಾಮೆ, ಸಜ್ಜೆ, ಹೆಳ್ಳು, ಹುಚ್ಚೆಳ್ಳು, ಹೆಸರು, ಜೋಳ, ಹುರಳಿ, ಅಲಸಂದಿ, ಅವರೆ, ಮತ್ತು ತೊಗರಿ ಪ್ರಾಯಶಃ ಯಲ್ಲಾ ತಾಲ್ಲೂಕುಗಳಲ್ಲಿಯೂ ಈಟುವಾದವು. ಸದರೀ ಮಾಹೇಯಲ್ಲಿ ಫಸಲ್‌ಗಳ ಸ್ಥಿತಿ ಚನ್ನಾಗಿತ್ತು.

ಜನಾರೋಗ್ಯ.—ತುಮಕೂರು, ಮದ್ದಗಿರಿ ಮತ್ತು ಸೀರಾ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜ್ವರವು ವ್ಯಾಪಿಸಿತ್ತು. ಚಳ್ಳಕೆರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಶೀಪುಬು ವ್ಯಾಪಿಸಿತ್ತು; ಇತರ ಸ್ಥಳಗಳಲ್ಲಿ ಆರೋಗ್ಯ ಚನ್ನಾಗಿತ್ತು. ಯೆಲ್ಲಾ ಕಾರಣಗಳಿಂದಲೂ ನವೆಂಬರ್ ಮಾಹೆಯಲ್ಲಿ 827 ಮಂದಿಯೂ, ಸ್ಯ 1883ನೇ ಇಸವಿ ಅಕ್ಟೋಬರ್‌ನಲ್ಲಿ 713 ಮಂದಿಯೂ ಮೃತಪಟ್ಟರು.

ಜ್ವಾರ್.—ಕಾಲುಬಾಯಿ ಜ್ವರ, ಚಪ್ಪೇರೋಗ, ದೊಮ್ಮೆರೋಗ ಮತ್ತು ಬೊಬ್ಬೆ ರೋಗ ಕೆಲವು ಭಾಗಗಳಲ್ಲಿ ವ್ಯಾಪಿಸಿದೆ. ಜ್ವಾರಗಳಲ್ಲಿ ಪುಂಟಾದ ಮರಣ ಸಂಖೆಗಳು ಈ ಕೆಳಗೆ ಕಂಡ ಮೇರೆ ತೋರಿಸಿದ್ದ:—

ಹಸುಗಳು ..	145	ಕುದುರೆಗಳು ..	6
ಎತ್ತುಗಳು ..	163	ಕತ್ತೆಗಳು ..	10
ಎಮ್ಮೆಕೋಣಗಳು	164		
ಕುರೀ ಮತ್ತು ಮೇಕೆಗಳು ..	2,473	ಜುಮ್ಲಾ	2,961.

ಜಮೀರ್ಗಳು.—1,344—14—0 ರೂಪಾಯಿಗಳ ಕಂದಾಯವುಳ್ಳ ಜಮೀರ್ಗಳು ಹೊಸದಾಗಿ ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದೂ ಇಲ್ಲವು.